Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Anulekha Bayari
Bulletin Editor

Volume 39 | Issue - 5 | 1st August 2024

# Club Assembly

Time : 7.00 p.m.
Venue : Hotel Shivaprasad Grand, Kundapura

39th year of Service and Fellowship

## ವಾರದ ಸಭೆಯ ವರದಿ
















ಕಳೆದ ವಾರದ ಸಭೆಯು ನಮ್ಮ ಕ್ಲಬ್ಬಿನ ಕುಟುಂಬ ಸಮ್ಮೇಳನ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾಗಿ "ದಿ ಎಕ್ಸ್‌ಪ್ರೆಶನ್" ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಹಾಸ್ಯ ಭರಿತ ಉತ್ತಮ ಸಂದೇಶವುಳ್ಳ ನಗೆ ಪ್ರಹಸನಗಳು ನೆರೆದಿದ್ದ ರೋಟರಿ ಕುಟುಂಬಸ್ಥರನ್ನು ಮಂತ್ರಮುಗ್ಧವನ್ನಾಗಿಸಿತು. ಹಾಸ್ಯ ನಾಟಕದ ಜೊತೆಗೆ ತಂಡದ ಸದಸ್ಯರ ಸಂಗೀತ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದಲ್ಲಿ "ದಿ ಎಕ್ಸ್‌ಪ್ರೆಶನ್" ತಂಡದ ರೊ. ಆಲ್ವಿನ್ ಅವರನ್ನು ರೋಟರಿ ಕ್ಲಬ್ ಕುಂದಾಪುರ ಸೌತ್ ವತಿಯಿಂದ ಸನ್ಮಾನಿಸಲಾಯಿತು. ಈ ಸಂಪೂರ್ಣ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ರೊ. ಶಾಂತರಾಮ್ ಪ್ರಭು, ರೊ. ಔಜ್ಲಿನ್ ರೆಬೆಲ್ಲೊ, ರೊ. ದೋಮ ಚಂದ್ರಶೇಖರ್, ರೊ. ಡಾ. ನಾಗೇಶ್, ರೊ.ಡಾ. ರಾಜೇಶ್ ಬಾಯರಿ, ರೊ. ಡಾ. ಅನುಲೇಖ ಬಾಯರಿ ವಹಿಸಿಕೊಂಡು ಉತ್ತಮ ಕುಟುಂಬ ಸಮ್ಮಿಲನವನ್ನು ನಮ್ಮ ಸದಸ್ಯರಿಗೆ ನೀಡಿದರು. ವಾರದ ಚಿಂತನೆಯನ್ನು ರೊ. ಮನೋಹರ ಪಿ. ನೆರವೇರಿಸಿದರು. ರೋಟರಿ ಮಾಹಿತಿಯನ್ನು ರೊ. ಕೆ ಕೆ ಕಾಂಚನ್ ನೀಡಿದರು. ಈ ಒಂದು ಕುಟುಂಬ ಸಮ್ಮಿಲನದಲ್ಲಿ ನಮ್ಮ ರೋಟರಿಯ ಸದಸ್ಯರು ತಮ್ಮ ಕುಟುಂಬದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು.

## ನೂತನ ಸದಸ್ಯರ ಪರಿಚಯ



### ರೊ. ರೇಗನ್ ಲೋಬೋ

ತಮ್ಮ ಕುಟುಂಬ ಸಾಧಾರಣ 80 ವರ್ಷಗಳಿಂದ ನಡೆಸಿಕೊಂಡು ಬಂದಿರುವಂತಹ ಟ್ರಾನ್ಸ್‌ಪೋರ್ಟ್ ವ್ಯವಹಾರವನ್ನು ಮುನ್ನಡೆಸಿಕೊಂಡು ಸಮರ್ಥವಾಗಿ ನಿರ್ವಹಿಸುತ್ತಿರುವ ಶ್ರೀ ರೇಗನ್ ಲೋಬೋರವರು ಒಬ್ಬ ಸ್ನೇಹಜೀವಿ. ಸಾಮಾಜಿಕ ಸೇವೆ ಮತ್ತು ಕಳಕಳಿಯನ್ನು ಹೊಂದಿರುವ ಇವರು ಅಗತ್ಯವಿರುವವರಿಗೆ ಸದಾ ತಮ್ಮ ಸಹಾಯ ಹಸ್ತ ನೀಡುವ ಗುಣಗಳಿಂದ ಜನಾನುರಾಗಿಯಾಗಿರುತ್ತಾರೆ. ಪತ್ನಿ – ಪ್ರಿನ್ಸಿಯ – ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿ ವರ್ಕ್ ಫ್ರಂ ಹೋಮ್ ಉದ್ಯೋಗಿಯಾಗಿರುತ್ತಾರೆ.

ಮಗಳು ರೀಸಾ 5ನೇ ತರಗತಿಯಲ್ಲಿ ಓದುತ್ತಿದ್ದು, ಮಗ ರೀವನ್ 2ನೇ ತರಗತಯಲ್ಲಿ ಕಲಿಯುತ್ತಿದ್ದಾನೆ.

### ರೊ. ವಿವಿರಾಜ್ ಹೆಗ್ಡೆ



ಕೆನರಾ ಬ್ಯಾಂಕ್‌ನ ನಿವೃತ್ತ DGM ಹಾಗೂ ಕುಂದಾಪುರ ಮತ್ತು ಬೈಂದೂರು ರೋಟರಿ ಕ್ಲಬ್‌ನ active member ಆಗಿದ್ದ ಬೈಲೂರು ಶಾಂತಾರಾಮ್ ಹೆಗ್ಡೆ ಹಾಗೂ ಶ್ರೀಮತಿ ಸುಮಾ ಹೆಗ್ಡೆ ಇವರ ಸುಪುತ್ರನಾದ ವಿವಿರಾಜ್ ಹೆಗ್ಡೆಯವರು 15–04–1973ರಲ್ಲಿ ಜನಿಸಿದರು. ಬಿ. ಕಾಂ. ಪದವಿಯನ್ನು ಡೆಲ್ಲಿ ಯುನಿವರ್ಸಿಟಿಯಲ್ಲಿ ಪಡೆದಿರುವ ಇವರು ಕುಂದಾಪುರದ ಶ್ರೀ ಸಾಯಿ ಫೈನಾನ್ಸ್‌ನ ಮಾಲೀಕರಾಗಿದ್ದಾರೆ.

ಕ್ರೀಡೆ ಹಾಗೂ ಪ್ರಚಲಿತ ವಿದ್ಯಮಾನದಲ್ಲಿ ಆಸಕ್ತಿ ಹೊಂದಿರುವ ಇವರು ಓರ್ವ ಪುತ್ರನನ್ನು ಹೊಂದಿದ್ದಾರೆ.




ರೋಟರಿಯು ಜುಲೈ ತಿಂಗಳನ್ನು ಮಹಿಳೆ ಮತ್ತು ಮಕ್ಕಳ ಅಭ್ಯುದಯ ತಿಂಗಳಾಗಿ ಗುರುತಿಸಿಕೊಂಡಿರುವುದರಿಂದ ಹಾಗೂ ಈ ವರ್ಷ Dist. Projectನಲ್ಲಿ ಆರೋಗ್ಯದ ರಕ್ಷಣೆಗೆ ಪ್ರಾಮುಖ್ಯತೆ ನೀಡಬೇಕಾಗಿರುವುದರಿಂದ ನಮ್ಮ ಕ್ಲಬ್‌ನ ವತಿಯಿಂದ ತಲ್ಲೂರು, ಪಿಂಗಣಿಗುಡ್ಡೆ, ರಾಜಾಡಿ, ಕೋಟೆಬಾಗಿಲು ಇಲ್ಲಿನ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ 156 ಕುಟುಂಬದ 92 ಚಿಕ್ಕ ಮಕ್ಕಳನ್ನು ಅಂಗನವಾಡಿ ಕಾರ್ಯಕರ್ತೆಯರಿಂದ ಗುರುತಿಸಿಕೊಂಡು ತಲಾ ರೂ. 350/– ಮೌಲ್ಯದ ಪ್ರೋಟೀನ್ ಪೌಡರ್ ಟಿನ್‌ಗಳನ್ನು 26–07–2024ರಂದು ವಿತರಿಸಲಾಯಿತು.




ತಾ. 28–07–2024ರಂದು ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಪದಪ್ರದಾನ ಸಮಾರಂಭವು ನಾರಾಯಣ ವಿಶೇಷ ಶಾಲೆಯಲ್ಲಿ ಕ್ಲಬ್ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ರೊ. ಸತ್ಯನಾರಾಯಣ ಪುರಾಣಿಕರು ಆಗಮಿಸಿದ್ದರು. RCC ಅಧ್ಯಕ್ಷರಾಗಿ ಯೋಗಿಶ್ ಆಚಾರ್ಯ ಕಾರ್ಯದರ್ಶಿಯಾಗಿ ಪ್ರಭಾಕರ ಆಚಾರ್ಯ ಹುದ್ದೆಯನ್ನು ಸ್ವೀಕರಿಸಿದರು ಇದೇ ಸಂದರ್ಭದಲ್ಲಿ ವನಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಇನ್ನರ್‌ವೀಲ್ ಅಧ್ಯಕ್ಷೆ ರೊ. ಸುರೇಖಾ ಪುರಾಣಿಕ್‌ರವರು ಹಾಗೂ ರೊ ಔಜಲಿನ್ ರೆಬೆಲ್ಲೋರವರು ಉಪಸ್ಥಿತರಿದ್ದರು.




ತಾ. 29–07–2024ರಂದು ತಲ್ಲೂರು ಹೈಸ್ಕೂಲ್ ಇಂಟರ‍್ಯಾಕ್ಟ್ ಪದಪ್ರದಾನ ಸಮಾರಂಭ ನಡೆಯಿತು. ಹೃದಯಾಘಾತವಾದಾಗ ನೀಡಬೇಕಾದ ಪ್ರಥಮ ಚಿಕಿತ್ಸೆ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಕ್ರಮ ನಡೆಸಿದರು. ರೊ. ಡಾ. ಉಮೇಶ್ ಪುತ್ರನ್ ಸಹಕರಿಸಿದರು. ರೊ. ಗುರುರಾಜ್ ಕೋತ್ವಾಲ್ ಮತ್ತು ತಂಡದವರು ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ತಿಳಿಸಿದರು.




ತಾ. 30–07–2024ರಂದು ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಮೂಲಕ ಆರ್ಥಿಕವಾಗಿ ಹಿಂದುಳಿದ ಓರ್ವ ವಿದ್ಯಾರ್ಥಿಗೆ ಶ್ರೀಮತಿ ಸುಪ್ರಿಯಾ ಕಾಮತ್‌ರವರು ನೀಡುವ ಧನಸಹಾಯ ರೂ. 60,000/– ಚೆಕ್ ಅನ್ನು ಬಿ. ಬಿ. ಹೆಗ್ಡೆ ಕಾಲೇಜು ಕುಂದಾಪುರ ಇವರ ಸಂಯೋಜಕತ್ವದಲ್ಲಿ ನೆರವೇರಿತು.

